# **ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸುಳ್ಯ, ದ.ಕ.**

## **ಸಿ.ಸಿ.ನಂ.203/2026**

ಪಿರ್ಯಾದಿದಾರರು : ಸುಳ್ಯ ಪೋಲೀಸ್ ಠಾಣೆ

-ವಿರುದ್ಧ-

ಆರೋಪಿ : ವಿಕಿತ್ ಕುಮಾರ್ ಕೆ
ಬಿನ್. ದಯಾನಂದ
ವಯಸ್ಸು 32 ವರ್ಷ,
ವಾಸಃ ಕಾಡುಸೋರಂಜ ಮನೆ,
ಮಂಡೆಕೋಲು ಗ್ರಾಮ,
ಸುಳ್ಯ ತಾಲೂಕು. ದಕ್ಷಿಣ ಕನ್ನಡ.

### **ದೋಷಾರೋಪಣೆ**

ನಾನು ಶ್ರೀಮತಿ ತಟ್ಟಂಡ ದಮಯಂತಿ ಸೋಮಯ್ಯ, ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿ, ಈ ಮೂಲಕ ನಿಮ್ಮನ್ನು ದೋಷಾರೋಪಣೆಗೆ ಗುರಿಪಡಿಸುವುದೇನೆಂದರೆ

ದಿಃ 30.01.2026 ರಂದು ಸಂಜೆ 7.30 ರ ಸಮಯದಲ್ಲಿ ಸುಳ್ಯ ಪೋಲೀಸ್ ಠಾಣಾ ಸರಹದ್ದು, ಮಂಡೆಕೋಲು ಗ್ರಾಮದ ಕಾಡುಸೂರಂಜ ಎಂಬ ಸ್ಥಳದಲ್ಲಿ ಚಾಸಾ-1ನೇಯವರು ರಬ್ಬರ್ ಟ್ಯಾಪಿಂಗ್ ಮಾಡಿ ಮನೆಗೆ ಬರುತ್ತಿದ್ದಾಗ ಆರೋಪಿಯಾದ ನೀವು ಚಾಸಾ-1 ರವರನ್ನು ಕುರಿತು ಬೇರ್ವಸಿ ಸೂಳೆ ಮಕ್ಕಳೇ ನನ್ನನ್ನು ಮರ್ಲೆ ಎಂದು ಹೇಳಿರುವುದು ಯಾರು ಎಂದು ಕೇಳುತ್ತಾ, ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಆ ಮೂಲಕ ಆರೋಪಿಯಾದ ನೀವು ಭಾ.ನ್ಯಾಸಂ.ಕಲಂ.352 ರಂತೆ ದಂಡಿಸಲ್ಪಡುವ ಅಪರಾದ ಎಸಗಿದ್ದೀರೆಂದು ಆರೋಪಿಸಲಾಗಿದೆ.

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಲ್ಲಿಯೇ ಇದ್ದ ಅಡಿಕೆ ಮರದ ಸಲಾಕೆಯಿಂದ ಚಾಸಾ-1 ರವರ ಹಣೆಗೆ ಮತ್ತು ಎಡ ಕಿವಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಆ ಮೂಲಕ, ನೀವು ಭಾ.ನ್ಯಾಸಂ.ಕಲಂ 118(1) ರಂತೆ ದಂಡಿಸಲ್ಪಡುವ ಅಪರಾದ ಎಸಗಿದ್ದೀರೆಂದು ಆರೋಪಿಸಲಾಗಿದೆ.

3. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಚಾಸಾ-1 ರವರನ್ನು ಕುರಿತು ಇವತ್ತು ನೀನು ಬದುಕಿದಿಯಾ, ಮುಂದಕ್ಕೆ ನಿನ್ನನ್ನು ಕೊಲ್ಲದೇ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ, ಆ ಮೂಲಕ ಆರೋಪಿಯಾದ ನೀವು ಭಾ.ನ್ಯಾ.ಸಂ.ಕಲಂ.351(2) ರಂತೆ ದಂಡಿಸಲ್ಪಡುವ ಅಪರಾದ ಎಸಗಿದ್ದೀರೆಂದು ಆರೋಪಿಸಲಾಗಿದೆ.

ಪ್ರಶ್ನೆ 1. ಈ ಮೇಲೆ ಓದಿ ಹೇಳಿದ ಮತ್ತು ನಿಮ್ಮ ವಿರುದ್ಧ ಪ್ರತ್ಯೇಕವಾಗಿ ಮಾಡಲಾದ ಆರೋಪಗಳ ಬಗ್ಗೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರಶ್ನೆ 2. ನೀವು ಈ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ

(ಈ ಮೇಲ್ಕಂಡ ದೋಷಾರೋಪಣೆಯ ವಿವರಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)

ದಿನಾಂಕಃ 21.07.2026
ಸ್ಥಳಃ ಸುಳ್ಯ ತಾಲೂಕು

(ಶ್ರೀಮತಿ ತಟ್ಟಂಡ ದಮಯಂತಿ ಸೋಮಯ್ಯ)
ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿ
ಸುಳ್ಯ ತಾಲೂಕು, ದ.ಕ. ಜಿಲ್ಲೆ.